ನಾವು, ಅವರು ಎಲ್ಲಾ ಸೇರಿಯೇ ಇದರ ಬಗ್ಗೆ ಒಂದು ನಿರ್ಣಯ ಮಾಡಿದ್ದೇವೆ. ನನಗೂ ಕೂಡ ಇದರಲ್ಲಿ ಲೋಪದೋಷವಿದೆ ಎಂದು ಕಂಡಿದೆ. ನಮ್ಮ ಸರ್ಕಾರಿ ಆಜ್ಞೆಯಲ್ಲಿ ಮನೆ ಕಳೆದುಕೊಂಡವರಿಗೆ ಮಾತ್ರ ಉದ್ಯೋಗ ಕೊಡುವಂಥಾದ್ದು ನೂರಾರು ಎಕರೆ ಜಮೀನು ಕಳೆದುಕೊಂಡವನಿಗೆ ಮನೆ ಅಲ್ಲಿ ಇಲ್ಲದೇ ಇದ್ದರೆ, ಎಲ್ಲೋ ಗ್ರಾಮಾಣದಲ್ಲಿ ಇದ್ದರೆ, ಅವನಿಗೆ ಉದ್ಯೋಗ ಇಲ್ಲ ಎನ್ನತಕ್ಕಂಥಾದ್ದು ಸರಿಯಲ್ಲ. ಎನ್ನುವುದನ್ನು ನಾವು ವ್ಯಕ್ತಪಡಿಸಿದ್ದೇವೆ. ನಾನು ತಮ್ಮ ಕಳಕಳಿಯನ್ನು ಉದ್ಯೋಗ ಮಂತ್ರಿಗಳ ಗಮನಕ್ಕೆ ತಂದು ಇದಕ್ಕೆ ಸೂಕ್ತ ತಿದ್ದುಪಡಿಯನ್ನು ತರಲಿಕ್ಕೆ ಪ್ರಯತ್ನ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದರ ಜೊತೆಗೆ, ಈ ಹೆಚ್.ಪಿ.ಸಿ.ಎಲ್ ಎನ್ನತಕ್ಕ ಕಂಪನಿ, ಕೇಂದ್ರಸರ್ಕಾರದ ಅಧೀನದಲ್ಲಿರತಕ್ಕ ಒಂದು ಕಂಪನಿ. ವಯಸ್ಸಿನ ಬಗ್ಗೆ ರಿಲ್ಯಾಕ್ಷೇಷನ್ ಮಾಡಿ ನೀವು ಅವರಿಗೆ ಉದ್ಯೋಗ ಕೊಡಬೇಕು ಎಂದು ಈಗಾಗಲೇ ನಾವು ತಿಳಿಸಿದ್ದೇವೆ. ಒಂದುವೇಳೆ, ಅವರು ಐದೇ ವರ್ಷ ಕೆಲಸ ಮಾಡುವುದಿದ್ದರೆ, ಅಷ್ಟು ವರ್ಷ ಕೆಲಸ ಮಾಡಿ, ನಿವೃತ್ತಿಯಾಗುವುದಿದ್ದರೆ, ನಿವೃತ್ತಿಯಾಗಲಿ. ಆ ಪ್ರಶ್ನೆ ಅಲ್ಲಿ ಬರಬಾರದು, ಇದೊಂದು ಕಂಪನಿ. ಆ ತರಹ ಮಾಡಬೇಕೆಂದು ನಾವು ಅವರಿಗೆ ಬರೆದಿದ್ದೇವೆ. ಇನ್ನು ನಾನು ಜಿಲ್ಲಾಮಟ್ಟದಲ್ಲಿ ಪುನಃ ಒಂದು ಸಭೆ ಮಾಡಿ, ಅವರ ಮೇಲೆ ಒತ್ತಡವನ್ನು ಹೇರುತ್ತೇವೆ. ಒಂದುವೇಳೆ, ಅವರು ನಮ್ಮ ಜೊತೆಯಲ್ಲಿ ಸಹಕರಿಸಿದೇ ಇದ್ದಪಕ್ಷದಲ್ಲಿ ರಾಜ್ಯಸರ್ಕಾರ ಕೂಡ ಅವರ ಜೊತೆಯಲ್ಲಿ ಸಹಕರಿಸುವುದಿಲ್ಲವೆಂದು ಹೇಳುತ್ತೇನೆ.

(ಖ) ಬಿ.ಡಿ.ಓ. ಹುದ್ದೆಗಳನ್ನು ರದ್ದುಪಡಿಸಿರುವುದು

ಶ್ರೀ ವಸಂತ ವಿ.ಸಾಲಿಯಾನ (ಕಾಪು): ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ 175 ತಾಲ್ಲೂಕುಗಳಲ್ಲಿ ಸೇವೆ ಸಲ್ಲಿಸುತ್ತಿದ್ದ ಬಿ.ಡಿ.ಓ.ಗಳ ಹುದ್ದೆಯನ್ನು ರಾಜ್ಯಸರ್ಕಾರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರು ಆದೇಶ ಹೊರಡಿಸಿ, ಅವರ ಹುದ್ದೆಗಳನ್ನು ರದ್ದುಪಡಿಸಿದ್ದಾರೆ. ಇದರಿಂದಾಗಿ ಕರ್ನಾಟಕ ರಾಜ್ಯದಲ್ಲಿ, ಗ್ರಾಮೀಣಾಭಿವೃದ್ಧಿ ಕೆಲಸ ಕುಂಠಿತವಾಗಿದೆ. ಮತ್ತು ಅದೇ 175 ಬಿ.ಡಿ.ಓ.ಗಳಿಗೆ ಬದಲಿ ಹುದ್ದೆಗಳಿಗೆ ಪೋಸ್ಟಿಂಗ್ಸ್ ಮಾಡಲಿಲ್ಲ. ಆದ್ದರಿಂದ, ನಾನು ಮಾನ್ಯ ಪಂಚಾಯತ್‌ರಾಜ್ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಆದಷ್ಟುಬೇಗ ಈ 175 ಬಿ.ಡಿ.ಓ.ಗಳಿಗೆ ಬದಲಿ ಹುದ್ದೆಗೆ ಪೋಸ್ಟಿಂಗ್ ಮಾಡಬೇಕೆಂದು ನಾನು ಒತ್ತಾಯಿಸುತ್ತೇನೆ.

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಈಗ ಗ್ರಾಮೀಣಾಭಿವೃದ್ಧಿ ಸಚಿವರು ಇಲ್ಲ. ಈ ಹುದ್ದೆಗಳನ್ನು ರದ್ದು ಮಾಡಿರುವುದು ನಿಜ. ಅವರಿಗೆ ಬೇರೆ ಹುದ್ದೆಗಳನ್ನು ಕೊಡುವುದಕ್ಕೆ ಈಗಾಗಲೇ ಒಂದು ಪ್ರಸ್ತಾಪ ನಡೆಯುತ್ತಾ

ಇದೆ. ಅವರು ಬಂದಮೇಲೆ, ಈ ವಿಚಾರವನ್ನು ಅವರಿಗೆ ತಿಳಿಸಿ, ಅವರಿಗೆ ಬೇರೆ ಕಡೆ ಉದ್ಯೋಗ ಕೊಡುವುದಕ್ಕೆ ನಾವು ಏರ್ಪಾಡು ಮಾಡುತ್ತೇವೆ.

(ಗ) ರಾಜ್ಯದಲ್ಲಿರುವ ನರಸಣ್ಣ ಜನಾಂಗ ಕುರಿತು.

ಶ್ರೀ ಎ.ರುಕ್ಮಯ್ಯಪೂಜಾರಿ (ವಿಟ್ಲ): ಮಾನ್ಯ ಅಧ್ಯಕ್ಷರೇ, ನಾನು ಈ ವಿಷಯವನ್ನು ಹಲವಾರು ಸಲ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಅದರ ಬಗ್ಗೆ ಸರಿಯಾದ ಉತ್ತರ ಕೂಡ ಇಲ್ಲ, ಮತ್ತು ಅದರ ಬಗ್ಗೆ ಸರಿಯಾದ ಕ್ರಮ ಕೂಡ ತೆಗೆದುಕೊಂಡಿಲ್ಲ. ಆದ್ದರಿಂದ, ನನಗೆ ನಿರ್ದಿಷ್ಟವಾದ ಉತ್ತರ ಬೇಕು ಮತ್ತು ಸರಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರವನ್ನು ತಮ್ಮ ಮೂಲಕ ಒತ್ತಾಯಿಸುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಈ ನರಸಣ್ಣ ಜನಾಂಗದವರು, ಆರ್ಥಿಕವಾಗಿ ಬಹಳ ಹಿಂದುಳಿದವರು ಹಾಗೆಯೆ ಶಿಕ್ಷಣದಲ್ಲಿಯೂ ಕೂಡ ಬಹಳ ಹಿಂದುಳಿದಂತಹ ಜನಾಂಗ. ಅವರು ಅಲೆಮಾರಿ ಜನಾಂಗ. ಅವರನ್ನು ನಮ್ಮ ರಾಜ್ಯದಲ್ಲಿ ಬೇರೆ ಬೇರೆ ಜಿಲ್ಲೆಗಳಲ್ಲಿ ಬೇರೆ ಬೇರೆ ಹೆಸರುಗಳಲ್ಲಿ ಕರೆಯುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಅವರನ್ನು ನರಸಣ್ಣ ಎಂದು ಕರೆಯುತ್ತಿದ್ದಾರೆ. ಇನ್ನು ಕೆಲವು ಜಿಲ್ಲೆಗಳಲ್ಲಿ ಅವರನ್ನು ಹಕ್ಕಿಪಿಕ್ಕಿ ಜನಾಂಗ ಎಂದು ಕರೆಯುತ್ತಿದ್ದಾರೆ. ದಾವಣಗೆರೆ, ಸಾಗರ, ಈ ಕಡೆ ಹಂದಿಜೋಗಿ ಜನಾಂಗ ಎಂದು ಕರೆಯುತ್ತಿದ್ದಾರೆ. ಹಕ್ಕಿಪಿಕ್ಕಿ ಮತ್ತು ಹಂದಿಜೋಗಿ ಜನಾಂಗದವರನ್ನು ಪರಿಶಿಷ್ಟಜಾತಿಗೆ ಸೇರಿಸಲ್ಪಟ್ಟಿದೆ. ಆದರೆ ಈ ನರಸಣ್ಣ ಎನ್ನುವ ಜನಾಂಗದವರನ್ನು ಯಾವುದೇ ಒಂದು ಜಾತಿಗೆ ಸೇರಿಸಿಲ್ಲ. ಇದರಿಂದಾಗಿ ಇವರು ತುಂಬಾ ಅನ್ಯಾಯಕ್ಕೆ ಒಳಗಾಗಿದ್ದಾರೆ. ಸರ್ಕಾರದ ಯಾವುದೇ ಸೌಲತ್ತು ಕೂಡ ಇವರಿಗೆ ಸಿಗುತ್ತಿಲ್ಲ. ನರಸಣ್ಣ ಜನಾಂಗ, ಹಕ್ಕಿಪಿಕ್ಕಿ ಜನಾಂಗ, ಮತ್ತು ಹಂದಿಜೋಗಿ ಜನಾಂಗ ಇವರಲ್ಲಿ ಹತ್ತಿರದ ಸಂಬಂಧ ಕೂಡ ಇದೆ. ಮತ್ತು ಅವರ ಇವರ ಆಚಾರ ವಿಚಾರ ಎಲ್ಲಾ ಸಮಾನ ಇದೆ. ಆದ್ದರಿಂದಾಗಿ ಈ ನರಸಣ್ಣ ಜನಾಂಗದವರನ್ನು ಕೂಡ ಪರಿಶಿಷ್ಟ ಜಾತಿಗೆ ಸೇರಿಸಬೇಕೆಂದು ನಾನು ಸರ್ಕಾರವನ್ನು ತಮ್ಮ ಮೂಲಕ ಒತ್ತಾಯಿಸುತ್ತಿದ್ದೇನೆ.

ಶ್ರೀ ಡಿ.ನಾರಾಯಣದಾಸ್ (ಸಮಾಜ ಕಲ್ಯಾಣ ರಾಜ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತೆ ನರಸಣ್ಣ ಜಾತಿಯು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಹಕ್ಕಿಪಿಕ್ಕಿ ಜನಾಂಗಕ್ಕೆ ಸಮಾನವಾದ ಜಾತಿಯಾಗಿದೆ ಎಂದು, ಮತ್ತು ರಾಜ್ಯದ ಇತರೇ ಜಿಲ್ಲೆಗಳಲ್ಲಿ ಹಂದಿಜೋಗಿ ಜನಾಂಗದ ಸಮಾನವಾಗಿದೆ ಎಂದು ತಿಳಿಸಿ ಸದರಿಯವರನ್ನು ಪರಿಶಿಷ್ಟ ವರ್ಗ ಅಥವಾ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಸೇರಿಸಬೇಕೆಂದು ಕೋರಿರುತ್ತಾರೆ. ಯಾವುದೇ ಜಾತಿ ಅಥವಾ ಜನಾಂಗವನ್ನು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಅಧಿಕಾರವು ಕೇಂದ್ರ ಸರ್ಕಾರಕ್ಕೆ ಮಾತ್ರ ಇರುತ್ತದೆ. ರಾಜ್ಯ ಸರ್ಕಾರ ಕೇವಲ ಶಿಫಾರಸ್ಸನ್ನು ಮಾತ್ರ ಮಾಡಬಹುದಾಗಿದೆ.